# ನಿಮ್ಮೊಡನೆ

## ರಾಜಕಾರಣದಲ್ಲಿ ಯುವೋದಯ

ಅಡಿಗರು ಕನಸು ಕಂಡಂತೆ 'ಹೊಸ ನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ, ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ, ಕಟ್ಟುವೆವು ನಾವು ಹೊಸ ನಾಡೊಂದನು' ಎನ್ನುವ ಹಂಬಲ ನನಸಾಗಲಿಕ್ಕೆ ಇದು ಸಕಾಲ.

ಭಾರತೀಯ ಚುನಾವಣಾ ಇತಿಹಾಸದಲ್ಲಿ ಹಿಂದೆಂದೂ ಚಲಾವಣೆಯಾಗದಷ್ಟು ದೊಡ್ಡ ಪ್ರಮಾಣದಲ್ಲಿ ಯುವಜನತೆ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲಿಕ್ಕೆ ಪ್ರಸಕ್ತ ಹದಿನಾರನೇ ಲೋಕಸಭಾ ಚುನಾವಣೆ ವೇದಿಕೆ ಕಲ್ಪಿಸಿದೆ. ಹಾಗಾಗಿ ಸರ್ಕಾರದ ರಚನೆಯಲ್ಲಿ ಇದೇ ಮೊದಲ ಬಾರಿಗೆ ಯುವಜನರು ಸಕ್ರಿಯ ಪಾತ್ರ ವಹಿಸುತ್ತಾರೆಂದು ಭಾವಿಸಬಹುದು. ಆದರೆ, ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಯುವ ಮತದಾರರು ದೊಡ್ಡ ಪ್ರಮಾಣದಲ್ಲಿದ್ದರೂ ಚುನಾವಣಾ ಕಣದಲ್ಲಿ ಮಾತ್ರ ಯುವರಂಗು ಕಾಣಿಸುತ್ತಿಲ್ಲ. ಮತ ಹಾಕಲಿಕ್ಕೆ ಯುವಜನತೆ ಪಾತ್ರ ಸೀಮಿತವಾಗಿರಲಿ, ಅಧಿಕಾರ ಚಲಾಯಿಸುವ ತೊಂದರೆ ಅವರಿಗೆ ಬೇಡ ಎನ್ನುವುದು ಎಲ್ಲ ರಾಜಕೀಯ ಪಕ್ಷಗಳ ಅಘೋಷಿತ ನೀತಿ ಇದ್ದಂತಿದೆ.

2011ರ ಜನಗಣತಿಯ ಅಂಕಿ ಅಂಶಗಳು ದೇಶದ ರಾಜಕಾರಣದಲ್ಲಿ ಯುವೋದಯದ ಸ್ಪಷ್ಟ ಸೂಚನೆ ನೀಡುವಂತಿವೆ. ಇದರ ಪ್ರಕಾರ 18ರಿಂದ 30 ವರ್ಷ ನಡುವಿನ ಮತದಾರರ ಸಂಖ್ಯೆ 30 ಕೋಟಿ. ಚುನಾವಣಾ ಆಯೋಗದ ಅಂಕಿ ಅಂಶಗಳು ಹೇಳುವಂತೆ ದೇಶದ ಒಟ್ಟು ಮತದಾರರ ಸಂಖ್ಯೆ 81.5 ಕೋಟಿ. ಅಂದರೆ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಮತದಾರರು 40 ವರ್ಷದೊಳಗಿನವರೇ ಆಗಿದ್ದಾರೆ. ಅದರಲ್ಲೂ 2.3 ಕೋಟಿ ಮತದಾರರು 18––19ರ ವಯಸ್ಸಿನವರು ಎನ್ನುವುದು ವಿಶೇಷ. ಪ್ರತಿ ಲೋಕಸಭಾ ಕ್ಷೇತ್ರದಲ್ಲೂ 18–22 ವಯಸ್ಸಿನ 90 ಸಾವಿರ ಮತದಾರರಿದ್ದಾರೆ. 22 ವರ್ಷದೊಳಗಿನ ಮತದಾರರು ಇದೇ ಮೊದಲ ಬಾರಿಗೆ ಲೋಕಸಭಾ ಚುನಾವಣೆಗೆ ತಮ್ಮ ಓಟು ಚಲಾಯಿಸುತ್ತಿದ್ದಾರೆ. ಈ ಎಲ್ಲ ಅಂಕಿಅಂಶಗಳನ್ನು ಕಲೆಹಾಕಿಕೊಂಡು ನೋಡಿದರೆ ಭಾರತೀಯ ಪ್ರಜಾಪ್ರಭುತ್ವದಲ್ಲಿ ಯುವರಂಗು ಸ್ಪಷ್ಟವಾಗಿ ಕಾಣಿಸುತ್ತಿದೆ. ಕವಿ ಗೋಪಾಲಕೃಷ್ಣ ಅಡಿಗರು ಕನಸು ಕಂಡಂತೆ 'ಹೊಸ ನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ, ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ, ಕಟ್ಟುವೆವು ನಾವು ಹೊಸ ನಾಡೊಂದನು' ಎನ್ನುವ ಹಂಬಲ ನನಸಾಗಲಿಕ್ಕೆ ಇದು ಸಕಾಲ. ಆದರೆ, ಈ ಯವೋತ್ಸಾಹಕ್ಕೆ ರಾಜಕೀಯ ಪಕ್ಷಗಳಿಂದ ತಕ್ಕ ಸ್ಪಂದನ ಇಲ್ಲ ಎನ್ನುವುದು ಪ್ರಜಾಪ್ರಭುತ್ವದ ವಿರೋಧಾಭಾಸ.

ರಾಜ್ಯದ ಚುನಾವಣಾ ಆಖಾಡವನ್ನು ನೋಡಿ. ನಟಿ ರಮ್ಯಾ ಸೇರಿದಂತೆ ನಲವತ್ತು ವರ್ಷದೊಳಗಿನ ನಾಲ್ವರು ಅಭ್ಯರ್ಥಿಗಳು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುತ್ತಿದ್ದಾರೆ. ಬಿಜೆಪಿಯಿಂದ ಮೂವರು ಚುನಾವಣಾ ಕಣದಲ್ಲಿದ್ದಾರೆ. ಆದರೆ, ಮತ್ತೊಂದು ಪ್ರಮುಖ ಪಕ್ಷ ಜಾತ್ಯತೀತ ಜನತಾದಳದ ಯಾವ ಅಭ್ಯರ್ಥಿಯೂ ನಲವತ್ತು ವರ್ಷದೊಳಗಿಲ್ಲ. ಈ ಪಕ್ಷಗಳಿಗೆ ಹೋಲಿಸಿದರೆ ಆಮ್ ಆದ್ಮಿ ಪಾರ್ಟಿಯೇ ವಾಸಿ. ಆ ಪಕ್ಷದಿಂದ ವಯಸ್ಸು ನಲವತ್ತು ದಾಟದ ಒಂಬತ್ತು ಮಂದಿ ಚುನಾವಣಾ ಕಣದಲ್ಲಿದ್ದಾರೆ. ರಾಜ್ಯದ ಚುನಾವಣಾ ಕಣದಲ್ಲಿನ ಅತ್ಯಂತ ಕಿರಿಯ ಸ್ಪರ್ಧಿ ಕಾಂಗ್ರೆಸ್‌ನ ರಮ್ಯಾ 31 ವರ್ಷದವರು. ಅತ್ಯಂತ ಹಿರಿಯ ಅಭ್ಯರ್ಥಿ ಜಾತ್ಯತೀತ ಜನತಾದಳದ ಎಚ್.ಡಿ. ದೇವೇಗೌಡ ಅವರಿಗೀಗ 81 ವರ್ಷ. ಅಂದರೆ 30 ವರ್ಷದೊಳಗಿನ ಒಬ್ಬ ಅಭ್ಯರ್ಥಿಯೂ ರಾಜ್ಯ ಚುನಾವಣಾ ಕಣದಲ್ಲಿಲ್ಲ. ಬೆಂಗಳೂರಿನ ಮೂರು ಲೋಕಸಭಾ ಕ್ಷೇತ್ರಗಳಲ್ಲಿ 40 ವರ್ಷದೊಳಗಿನ ಮತದಾರರು 41 ಲಕ್ಷಕ್ಕೂ ಹೆಚ್ಚು ಮಂದಿಯಿದ್ದಾರೆ. ಆದರೆ, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ (34) ಅವರನ್ನು ಹೊರತುಪಡಿಸಿದರೆ ಉಳಿದವರೆಲ್ಲ ನಲವತ್ತರ ಗಡಿ ದಾಟಿದವರು. ಪರಿಸ್ಥಿತಿ ಹೀಗಿರುವಾಗ, 'ಯುವ ಮತದಾರರು ಚುನಾವಣೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಬೇಕು, ಆ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು' ಎನ್ನುವ ಘೋಷಣೆಗಳು ಚರ್ವಿತ ಚರ್ವಣ ಎನ್ನಿಸುತ್ತವೆ.

ಸ್ಪರ್ಧೆಯಲ್ಲಿ ಯುವ ತಲೆಮಾರಿನ ಪ್ರಾತಿನಿಧ್ಯ ಕಡಿಮೆಯಿದ್ದರೂ ಚುನಾವಣಾ ಪ್ರಕ್ರಿಯೆಯಲ್ಲಿ ತರುಣ ತರುಣಿಯರು ಸಕ್ರಿಯರಾಗಿರುವುದು ಈ ಸಲದ ಚುನಾವಣೆಗಳ ವಿಶೇಷ. ಅರವಿಂದ ಕೇಜ್ರಿವಾಲ್‌ರ 'ಆಮ್ ಆದ್ಮಿ' ಪಕ್ಷದ ಕಾರ್ಯಕರ್ತರಲ್ಲಿ ಯುವಕರೇ ಹೆಚ್ಚಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ರಾಜಕಾರಣದ ಬಗ್ಗೆ ಚರ್ಚಿಸುವವರೂ, ವಿದ್ಯುನ್ಮಾನ ಮಾಧ್ಯಮವನ್ನು ಚುನಾವಣಾ ಪ್ರಚಾರಕ್ಕೆ ಬಳಸುವವರೂ ಹೆಚ್ಚಾಗಿದ್ದಾರೆ. ಇದೆಲ್ಲವೂ ಬದಲಾದ ಸಾಮಾಜಿಕ ರಾಜಕಾರಣದ ದಿಕ್ಕನ್ನು ಸೂಚಿಸುವಂತಿದೆ.

ಯುವಕರ ಜೊತೆಗೆ ಮಹಿಳೆಯರಲ್ಲಿ ಕೂಡ ರಾಜಕೀಯ ಜಾಗೃತಿ ನಿಧಾನವಾಗಿ ಮೂಡುತ್ತಿದೆ. ರಾಜಕಾರಣ ಹೆಣ್ಣುಮಕ್ಕಳಿಗಲ್ಲ ಎನ್ನುವ ಮಾತು ಸವಕಲಾಗುತ್ತಿದ್ದು, ರಾಜಕಾರಣದ ಪರಿಣಾಮ ಹೆಣ್ಣುಮಕ್ಕಳ ಮೇಲೆಯೇ ಹೆಚ್ಚು ಎನ್ನುವ ಅರಿವು ಹೆಚ್ಚುತ್ತಿದೆ. ಆದರೆ, ಈ ಬದಲಾವಣೆಗೆ ರಾಜಕೀಯ ಪಕ್ಷಗಳ ಸ್ಪಂದನ ಮಾತ್ರ ಪರಿಣಾಮಕಾರಿಯಾಗಿಲ್ಲ. ಇನ್ನುಮುಂದಾದರೂ ಯುವಜನತೆ ಹಾಗೂ ಮಹಿಳೆಯರನ್ನು ಸಕ್ರಿಯ ರಾಜಕಾರಣದಲ್ಲಿ ಮುಂಚೂಣಿಗೆ ತರುವಲ್ಲಿ ಎಲ್ಲ ಪಕ್ಷಗಳೂ ಮುಂದಾಗಬೇಕಿದೆ. ಅಂಥ ಅನಿವಾರ್ಯತೆಯನ್ನು ಮತದಾರರು ಪಕ್ಷಗಳಿಗೆ ಮನದಟ್ಟು ಮಾಡಿಕೊಡಬೇಕಾಗಿದೆ.

■ **ರಘುನಾಥ ಚ.ಹ.**

